# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1009
ವಿಧಾನ ಪರಿಷತ್ತು ಸದಸ್ಯರ ಹೆಸರು : ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ : 29.09.2020
ಉತ್ತರಿಸುವ ಸಚಿವರು : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಪಡಿತರ ಚೀಟಿಗಳನ್ನು ಪರಿಶೀಲಿಸಿ ಅರ್ಹತೆಯುಳ್ಳವರಿಗೆ ಪಡಿತರ ಚೀಟಿಗಳನ್ನು ವಿತರಿಸಲು ಹಾಗೂ ಅರ್ಹತೆಯಿಲ್ಲದಿರುವ ಫಲಾನುಭವಿಗಳನ್ನು ಕೈಬಿಡುವಂತೆ ಸ್ಥಳೀಯ ಜಾಗೃತ ಸಮಿತಿ ಸದಸ್ಯರ ಸಹಕಾರದೊಂದಿಗೆ ಪ್ರತಿ ವರ್ಷ ವರ್ಷಕ್ಕೊಂದು ಬಾರಿ ಆಹಾರ ಸುರಕ್ಷಾ ಮಾಹೆ ನಡೆಯುತ್ತಿದೆಯೇ; | ಪಡಿತರ ಚೀಟಿದಾರರ ಅರ್ಹತೆ ಮತ್ತು ಅನರ್ಹತೆಗಳನ್ನು ಪರಿಶೀಲಿಸಲು ಪ್ರತಿ ವರ್ಷ ಸೆಪ್ಟೆಂಬರ್ ಮಾಹೆಯಲ್ಲಿ "ಆಹಾರ ಸುರಕ್ಷಾ ಮಾಹೆ" ಆಚರಿಸಲು ಕ್ರಮವಹಿಸಲಾಗಿದೆ. ಅದರಂತೆ ರಾಜ್ಯಾದ್ಯಂತ ಪರಿಶೀಲನಾ ಕಾರ್ಯ ನಡೆಯುತ್ತಿದೆ. |
| ಆ | ನಡೆಯುತ್ತಿದ್ದಲ್ಲಿ, ಎಷ್ಟು ಜನ ಅನರ್ಹತೆಯುಳ್ಳ ಪಡಿತರ ಚೀಟಿಗಳನ್ನು ರದ್ದು ಪಡಿಸಲಾಗಿದೆ; | ರಾಜ್ಯದಲ್ಲಿ 2018 ರಿಂದ ಇಲ್ಲಿಯವರೆಗೆ ಒಟ್ಟು 2,18,889 ಪಿ.ಹೆಚ್.ಹೆಚ್ ಮತ್ತು ಅಂತ್ಯೋದಯ ಅನರ್ಹ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಿ ರದ್ದುಪಡಿಸಲಾಗಿದೆ. |
| ಇ | ಇನ್ನು ಎಷ್ಟು ಅನಧಿಕೃತ ಪಡಿತರ ಚೀಟಿಗಳನ್ನು ರದ್ದು ಪಡಿಸಲಾಗುವುದು; | ಅನರ್ಹ ಪಡಿತರ ಚೀಟಿ ಪತ್ತೆ ಮತ್ತು ರದ್ದು ಮಾಡುವ ಪ್ರಕ್ರಿಯೆ ನಿರಂತರವಾಗಿದ್ದು, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅನರ್ಹ ಪಡಿತರ ಚೀಟಿ ರದ್ದು ಮಾಡುವ ಕಾರ್ಯ ನಿರಂತರವಾಗಿರುತ್ತದೆ. |
| ಈ | ಈ ಬಗ್ಗೆ ಸರ್ಕಾರ ಏನು ಕ್ರಮಕೈಗೊಂಡಿದೆ? (ಸಂಪೂರ್ಣ ಮಾಹಿತಿ ನೀಡುವುದು) | ಅನರ್ಹರು ಹೊಂದಿರುವ ಪಡಿತರ ಚೀಟಿಯನ್ನು ಸ್ವ ಇಚ್ಛೆಯಿಂದ ಸಂಬಂಧಪಟ್ಟ ತಾಲ್ಲೂಕು/ವಲಯ ಕಛೇರಿಗಳಿಗೆ ಸಂಪರ್ಕಿಸಿ ಏಪ್ರಿಲ್ 2020ರೊಳಗೆ ಅಧ್ಯಾರ್ಪಣೆಯನ್ನು ಮಾಡುವಂತೆ ಕಾಲಾವಕಾಶವನ್ನು ನಿಗಧಿಪಡಿಲಾಗಿತ್ತು. ಈ ಅವಧಿ ಮುಗಿದ ನಂತರವೂ ಇಂತಹ ಅನರ್ಹರು ಪಡಿತರ ಚೀಟಿಯನ್ನು ಅಧ್ಯಾರ್ಪಣೆ ಮಾಡಿದಿದ್ದಲ್ಲಿ, ಇಲಾಖಾವತಿಯಿಂದ ಅನರ್ಹ ಪಡಿತರ ಚೀಟಿ ಹೊಂದಿರುವವರ ವಿರುದ್ಧ ದಂಡ ವಿಧಿಸಲಾಗುವುದು ಹಾಗೂ ಅವಶ್ಯಕ ವಸ್ತುಗಳ ಕಾಯ್ದೆ 1955 ರಡಿ ಹೊರಡಿಸಲಾದThe Prevention of unauthorized possession of ration card order 1977 ರನ್ವಯ ಪ್ರಕರಣ ದಾಖಲಿಸಲಾಗುವುದು. |

ಆನಾಸ 274 ಡಿಆರ್ಎ 2020 (ಇ-ಆಫೀಸ್)

(ಕೆ.ಗೋಪಾಲಯ್ಯ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.